## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1371
2. ಸದಸ್ಯರ ಹೆಸರು : ಡಾ: ತಳವಾರ್ ಸಾಬಣ್ಣ
3. ಉತ್ತರಿಸುವ ದಿನಾಂಕ : 19/03/2025
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿ ಹತ್ತಿರದ" ಸ್ವಾತಂತ್ರ್ಯ ಭವನ" (ರಂಗಾಯಣ ಎದುರು) ನಿರ್ಮಾಣ ಕಾಮಗಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಕಲಬುರಗಿ ನಗರದಲ್ಲಿನ "ಸ್ವಾತಂತ್ರ್ಯ ಭವನ" ನಿರ್ಮಾಣಕ್ಕೆ ಎಷ್ಟು ಹಣ ವೆಚ್ಚವಾಗಿದೆ ಹಾಗೂ ಎಷ್ಟು ಆಸನದ ಸಾಮರ್ಥ್ಯ ಹೊಂದಿದೆ; (ವಿವರ ನೀಡುವುದು) | ಕಲಬುರಗಿ ನಗರದಲ್ಲಿನ "ಸ್ವಾತಂತ್ರ್ಯ ಭವನ" ನಿರ್ಮಾಣವು 3 ಹಂತಗಳಲ್ಲಿ ರೂ.1150.06 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಇಲ್ಲಿಯವರೆಗೆ ರೂ.760.31 ಲಕ್ಷ ವೆಚ್ಚವಾಗಿರುತ್ತದೆ. 1ನೇ ಮತ್ತು 2ನೇ ಹಂತದ ಕಾಮಗಾರಿ ಪೂರ್ಣಗೊಂಡಿದ್ದು, 3ನೇ ಹಂತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸ್ವಾತಂತ್ರ್ಯ ಭವನದ ಒಟ್ಟು ಆಸನಗಳ ಸಾಮರ್ಥ್ಯ - 800. |
| ಇ) | ಸಾರ್ವಜನಿಕ ಉಪಯೋಗವಾಗಬೇಕಿದ್ದ "ಸ್ವಾತಂತ್ರ್ಯ ಭವನ" ಕಾಮಗಾರಿ ಸುಮಾರು 8 ವರ್ಷವಾದರೂ ಪೂರ್ಣವಾಗದಿರಲು ಕಾರಣಗಳೇನು; ಕಳಪೆ ಕಾಮಗಾರಿಯಾಗದೆ ಎಂದು ಸಾರ್ವಜನಿಕ ವಲಯದಲ್ಲಿ ಆರೋಪಗಳು ಕೇಳಿ ಬರುತ್ತಿದ್ದು, ಕಟ್ಟಡ ನಿರ್ಮಾಣದ ಗುಣಮಟ್ಟ ಕಾಪಾಡಲು ತೆಗೆದುಕೊಂಡು ಕ್ರಮಗಳೇನು; | ಸ್ವಾತಂತ್ರ್ಯ ಭವನದ 1ನೇ ಹಂತದ ಕಾಮಗಾರಿಯು ದಿನಾಂಕ: 07.01.2011ರಂದು ಪ್ರಾರಂಭವಾಗಿ, ಮೊದಲನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲು ಅವಧಿ ವಿಸ್ತರಣೆಯಾಗಿ ನಂತರ ದಿನಾಂಕ:30.08.2013ರಲ್ಲಿ ಪೂರ್ಣಗೊಂಡಿರುತ್ತದೆ.<br>2ನೇ ಹಂತದ ಕಾಮಗಾರಿಯು ದಿನಾಂಕ:04.01.2016 ರಲ್ಲಿ ಪ್ರಾರಂಭವಾಗಿ ಈ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದುದರಿಂದ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ. ಈ ಕಾಮಗಾರಿಯು ದಿನಾಂಕ:26.03.2020ರಲ್ಲಿ ಪೂರ್ಣಗೊಂಡಿರುತ್ತದೆ.<br>ಪ್ರಸ್ತುತ 3ನೇ ಹಂತದ ಕಾಮಗಾರಿಯು ದಿನಾಂಕ:21.11.2024ರಂದು ಪ್ರಾರಂಭವಾಗಿದ್ದು, ನಿಗಧಿತ ಅವಧಿಯಲ್ಲಿಯೇ ಅಂದರೆ ದಿನಾಂಕ:20.10.2025ರೊಳಗಾಗಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.<br>ಈ ಎಲ್ಲಾ ಹಂತದ ಕಾಮಗಾರಿಗಳನ್ನು ಲಭ್ಯವಿರುವ ಅನುದಾನಕ್ಕೆ ತಕ್ಕಂತೆ ಕೈಗೊಳ್ಳಲಾಗಿರುತ್ತದೆ. ಕಾಮಗಾರಿಯು ಇಲಾಖಾ ಗುಣ ಗುಣಭರವಸೆಯ ವಿಭಾಗದಿಂದ ಪ್ರತಿ ಹಂತದಲ್ಲಿ ಪರಿವೀಕ್ಷಣೆಗೆ ಒಳಪಡಿಸಿ ಗುಣ ಮಟ್ಟದಿಂದ ನಿರ್ಮಾಣ ಮಾಡಲಾಗುತ್ತಿದೆ. |
| ಈ) | "ಸ್ವಾತಂತ್ರ್ಯ ಭವನ" ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಿ ಕಲಬುರಗಿ ಜನರ ಸೇವೆಗೆ ಲಭ್ಯವಾಗುವಂತೆ ಮಾಡಲಾಗುವುದು? | ಮೂರನೇ ಹಂತದ ಕಾಮಗಾರಿ ದಿನಾಂಕ:21.11.2024 ರಂದು ಪ್ರಾರಂಭವಾಗಿದ್ದು, 11 ತಿಂಗಳ ಗುತ್ತಿಗೆ ಅವಧಿ ನೀಡಲಾಗಿರುತ್ತದೆ. ಕರಾರಿನ ಪ್ರಕಾರ ದಿನಾಂಕ:20.10.2025ರೊಳಗಾಗಿ ಪೂರ್ಣಗೊಳಿಸಿ ನಿಗಧಿತ ಗುತ್ತಿಗೆ ಅವಧಿಯಲ್ಲಿಯೇ ಸಾರ್ವಜನಿಕರ ಸೇವೆಗೆ ಒದಗಿಸಲಾಗುವುದು. |

ಸಂಖ್ಯೆ: ಲೋಇ 35 ಬಿಎಲ್ ಕ್ಯೂ 2025

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.